**2018 ಮಾರ್ಚ ವಾರ್ಷಿಕ ಪರೀಕ್ಷೆಗಾಗಿ** **ವ್ಯಾಕರಣ ವಿಶೇಷ**

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಬರೆಯಿರಿ. 10 * 01 = 10**

**ಮತ್ತು**

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ. 04 * 01 = 04**

**ಅಲಂಕಾರ–3 ಅಂಕ, ಛಂದಸ್ಸು–3 ಅಂಕ ಒಟ್ಟು= 20**

## 1. ವರ್ಣಮಾಲೆ(49)

**ಒಟ್ಟು ಸ್ವರಗಳು(13)**
**ಹ್ರಸ್ವಸ್ವರ: 06 ಅ,ಇ,ಉ,ಋ,ಎ,ಒ**
**ಧೀರ್ಘಸ್ವರ 07 ಆ,ಈ,ಊ,ಏ,ಐ,ಓ,ಔ**
**ಒಟ್ಟು ವ್ಯಂಜನಗಳು (34)**
**ವರ್ಗೀಯ (25)**
**ಅಲ್ಪಪ್ರಾಣ(10) ಕ್,ಚ್,ಟ್,ತ್,ಪ್, ಗ್,ಜ್,ಡ್,ದ್,ಬ್,**
**ಮಹಾಪ್ರಾಣ(10)ಖ್,ಛ್,ಠ್,ಥ್,ಫ್,ಘ್,ಝ್,ಢ್,ಧ್,ಭ್**
**ಅನುನಾಸಿಕ: (05)ಙ್,ಞ್,ಣ್,ನ್,ಮ್**
**ಅವರ್ಗೀಯ ವ್ಯಂಜನಗಳು (9) ಯ್,ರ್,ಲ್,ವ,ಶ,ಷ್,ಸ,ಹ್,ಳ್**
**ಯೋಗವಾಹಗಳು(02) ಅನುಸ್ವಾರ(ಂ) ವಿಸರ್ಗ(ಃ)**
**ಸಜಾತಿಯ ಸಂಯುಕ್ತಾಕ್ಷರ: ಅಪ್ಪ, ಅಕ್ಕ, ಅಜ್ಜ, ಕಜ್ಜ, ಹಣ್ಣು, ಮೆಚ್ಚು, ಕತ್ತಲೆ, ಇಲ್ಲ, ಎಚ್ಚರ, ಕಣ್ಣಿಗೆ, ಬಟ್ಟೆ**
**ವಿಜಾತಿಯ ಸಂಯುಕ್ತಾಕ್ಷರ: ಉಷ್ಣ, ಅಸ್ತ್ರ, ಅಕ್ಷರ, ಪುತ್ರ, ಸದ್ಗುಣ, ಮೃದು, ಕಾರ್ಯ, ಶಸ್ತ್ರ, ಸ್ಫೋಟಿಸು, ಅದ್ಭುತ, ಡಾಕ್ಟರ್**

## 2. ನಾಮಪದಗಳು

| ರೂಢನಾಮಗಳು | | | | |
|---|---|---|---|---|
| ನದಿ | ಪರ್ವತ | ಊರು | ದೇಶ | ಮನುಷ್ಯ |

*****

| ಅಂಕಿತನಾಮಗಳು | | | |
|---|---|---|---|
| ಸಹದೇವ | ಧರ್ಮರಾಯ | ರಾಹುಲ | ಕಮಲಾಕ್ಷ |

*****

| ಅನ್ವರ್ಥನಾಮಗಳು | | | |
|---|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ | ಪೂಜಾರಿ |

*****

| ಗುಣವಾಚಕಗಳು | | | |
|---|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು | ಹಳತು |

*****

| ಸಂಖ್ಯಾವಾಚಕಗಳು | | | |
|---|---|---|---|
| ಹನ್ನೆರಡು | ಐವತ್ತು | ಎಂಬತ್ತು | |
| **ಸಂಖ್ಯೇಯವಾಚಕಗಳು** | | | |
| ಮೂವರು | ಹನ್ನೆರಡನೆಯ | ಎಂಬತ್ತನೆಯ | ನಾಲ್ವರು |

******

| ಭಾವನಾಮಗಳು | | | | |
|---|---|---|---|---|
| ಕೆಂಪು | ಹಿರಿಮೆ | ನೋಟ | ಮಾಟ | ಆಟ |

*****

| ಪರಿಮಾಣವಾಚಕಗಳು | | | | |
|---|---|---|---|---|
| ಅಷ್ಟು | ಎಷ್ಟು | ಹಲವು | ಇನಿತು | ಅನಿತು |

*****

| ದಿಗ್ವಾಚಕಗಳು | | | | |
|---|---|---|---|---|
| ಮೂಡಣ | ತೆಂಕಣ | ಪಡುವಣ | ಈಶಾನ್ಯ | ಆಗ್ನೇಯ |

*****

## 3. ಸರ್ವನಾಮಗಳು

| | | |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ | ಅವನು/ಇವನು<br>ಅವಳು/ಇವಳು<br>ಅದು/ಇದು | ಅವರು/ಇವರು<br>ಅವರು/ಇವರು<br>ಅವು/ಇವು |

*****

| ಆತ್ಮಾರ್ಥಕ ಸರ್ವನಾಮಗಳು | | | |
|---|---|---|---|
| ತಾನು | ತಾವು | ತನ್ನ | ತಮ್ಮ |

*****

| ಪ್ರಶ್ನಾರ್ಥಕ ಸರ್ವನಾಮಗಳು | | | |
|---|---|---|---|
| ಯಾರು? | ಏನು? | ಯಾವುದು? | |

## 4. ತತ್ಸಮ– ತದ್ಭವಗಳು

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ದೃಷ್ಟಿ | **ದಿಟ್ಟಿ** | ತಪಸ್ವಿ | **ತವಸಿ** |
| ಗ್ರಹ | **ಗರ** | ಆರ್ಯ | **ಅಜ್ಜ** |
| ಚೀರ | **ಸೀರೆ** | ಸನಿಯ(ಹ) | **ಸಮೀಪ** |
| ವಿಜ್ಞಾಪನೆ | **ಬಿನ್ನಹ / ಬಿನ್ನಪ** | ಸಾಮಂತ | **ಸಾವಂತ** |
| ಸುಧಾ / ಸುಧೆ | **ಸೊದೆ** | ಯುಗ | **ಜುಗ** |
| ವರ್ಷ | **ವರುಷ / ಬರಿಸ** | ಶ್ರೀ | **ಸಿರಿ** |
| ರಾಜ | **ರಾಯ** | ಭಕ್ತ | **ಬಕುತ** |
| ದಿಶಾ | **ದೆಸೆ / ದಿಸೆ /** | ಚಂದ್ರ | **ಚಂದಿರ** |
| ವೀರ | **ಬೀರ** | ವಂಶ | **ಬಂಚ** |
| ಸ್ಥಾನ | **ತಾಣ** | ಯಶ | **ಜಸ** |
| ಪಟ್ಟಣ | **ಪತ್ತನ** | ಕಾರ್ಯ | **ಕಜ್ಜ** |
| ವ್ಯಯ | **ಬೀಯ** | ಕೋಕಿಲಾ | **ಕೋಗಿಲೆ** |
| ವ್ಯಾಪಾರಿ | **ಬೇಹಾರಿ** | ಸಂದೇಹ | **ಸಂದೆಯ** |
| ಅಮೃತ | **ಅಮರ್ದು** | ದೀಪಿಕಾ | **ದೀವಿಗೆ** |
| ಪುಣ್ಯ | **ಹೂನ್ಯ** | ಅಂಗಳ | **ಅಂಗಲ** |
| ಪಕ್ಷಿ | **ಹಕ್ಕಿ** | ಬ್ರಹ್ಮ | **ಬೊಮ್ಮ** |
| ಶಶಿ | **ಸಸಿ** | ಶಿರ | **ಸಿರ** |
| ಕಲಶ | **ಕಲಸ** | ಅಂಕುಶ | **ಅಂಕುಸ** |
| ದ್ಯೂತ | **ಜೂಜು** | ವಂಧ್ಯಾ | **ಬಂಜೆ** |
| ವಿದ್ಯಾಧರ | **ಬಿಜ್ಜೋದರ** | ವೈಶಾಖ | **ಬೇಸಗೆ** |
| ಕುಠಾರ | **ಕೊಡಲಿ** | ಪಾದುಕಾ | **ಹಾವುಗೆ** |
| ಅರ್ಕ | **ಎಕ್ಕ** | ಶುನಕ | **ಸೊಣಗ** |
| ಅಟವಿ | **ಅಡವಿ** | ಪ್ರಸಾದ | **ಹಸಾದ** |
| ಯಜ್ಞ | **ಜನ್ನ** | ಕಾವ್ಯ | **ಕಬ್ಬ** |

## 5. ದ್ವಿರುಕ್ತಿಗಳು

| | | | |
|---|---|---|---|
| ಹೌದುಹೌದು | ನಿಲ್ಲುನಿಲ್ಲು | ಬಂದೆಬಂದೆ | ಓಡಿಓಡಿ |
| ದೊಡ್ಡದೊಡ್ಡ. | ಹೆಚ್ಚುಹೆಚ್ಚು | ಮನೆಮನೆ | ಕೇರಿಕೇರಿ |
| ಊರೂರು | ನಿಲ್ಲುನಿಲ್ಲು. | ಎಲೇಎಲೇ | ಅಗೋಅಗೋ |
| | ದೊಡ್ಡದೊಡ್ಡ | ಈಗೀಗ | ಇರಲಿಇರಲಿ |
| ಬನ್ನಿಬನ್ನಿ | ಹತ್ತಿರಹತ್ತಿರ | ಅಗೋಅಗೋ | ಅಬ್ಬಬ್ಬಾ! |
| ಆಹಾಹಾ | ಬೇಡಬೇಡ | ಕೊಡುಕೊಡು | ನಡೆನಡೆ |
| ಅಮ್ಮಾಅಮ್ಮಾ | ಆಗಲಿಆಗಲಿ | ಬೇಗಬೇಗ | ನಡೆನಡೆ |
| ಓಡುಓಡು | ಅಯ್ಯೋಅಯ್ಯೋ, | ದೇವರೆದೇವರೇ | ಅಗೋಅಗೊ |
| ಆಗಲಿಆಗಲಿ, | ಹೌದೌದು, | ಇರುಳಿರುಳು | ನಡೆನಡೆ |
| ನೋಡಿನೋಡಿ | ನಮೋನಮೋ | ಹಾವುಹಾವು, | ಕೆಟ್ಟೆಕೆಟ್ಟೆ, |
| | ಬೆಂಕಿಬೆಂಕಿ. | ದುರುಳಾದುರುಳಾ | ಸಾಕುಸಾಕು |
| | ತಿರುತಿರುಗಿ | ಒಬ್ಬೊಬ್ಬ | |

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**

ಮೊದಲು + ಮೊದಲು = ಮೊತ್ತಮೊದಲು / ಮೊಟ್ಟಮೊದಲು
ಕಡೆಗೆ + ಕಡೆಗೆ = ಕಟ್ಟಕಡೆಗೆ / ಕಡೆಕಡೆಗೆ
ನಡುವೆ + ನಡುವೆ = ನಟ್ಟನಡುವೆ / ನಡುನಡುವೆ
ಬಯಲು +ಬಯಲು = ಬಟ್ಟಬಯಲು
ತುದಿ + ತುದಿ = ತುತ್ತತುದಿ
ಕೊನೆಗೆ + ಕೊನೆಗೆ = ಕೊನೆಕೊನೆಗೆ
ಮೆಲ್ಲನೆ + ಮೆಲ್ಲನೆ = ಮೆಲ್ಲಮೆಲ್ಲನೆ

## 6. ಜೋಡುನುಡಿಗಳು

ಸತಿಪತಿ ಕೆನೆಮೊಸರು ಹಾಲ್ಜೇನು ಮಕ್ಕಳುಮರಿ

ಹಳಹುಪ್ಪಡಿ ಸೊಪ್ಪುಸೆದೆ ಬಟ್ಟೆಬರೆ ಧೀರಶೂರ
ಕಾಫಿಗೀಫಿ, ದೇವರುಗೀವರು, ಹಣಗಿಣ ಪುಸ್ತಕಗಿಸ್ತಕ

*****

## 7. ಗ್ರಾಂಥಿಕ ರೂಪ

ಹೀಂಗ–ಹೀಗೆ, ಮ್ಯಾಗ–ಮೇಲೆ ಕಳುವ್ವಾರೆ–ಕಳುಹಿಸಿದ್ದಾರೆ
ಇಲ್ಲದ್ಹಂಗ–ಇಲ್ಲದ ಹಾಗೆ ಇಸವಾಸ–ವಿಶ್ವಾಸ ಸಕ್ಕಾರಿ–ಸಕ್ಕರೆ

## 8. ವಿಭಕ್ತಿ ಪ್ರತ್ಯಯಗಳು

| ಕ್ರ. ಸಂ. | ವಿಭಕ್ತಿಯ ಹೆಸರು | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಹಳಗನ್ನಡದ ವಿಭಕ್ತಿ ಪ್ರತ್ಯಯ | ಕಾರಕಾರ್ಥ |
|---|---|---|---|---|
| 1 | ಪ್ರಥಮಾ | ಉ | ಮ್ | ಕರ್ತ್ರರ್ಥ |
| 2 | ದ್ವಿತೀಯಾ | ಅನ್ನು | ಅಮ್ | ಕರ್ಮಾರ್ಥ |
| 3 | ತೃತೀಯಾ | ಇಂದ | ಇಮ್ / ಇಂದಂ | ಕರಣಾರ್ಥ |
| 4 | ಚತುರ್ಥೀ | ಗೆ/ಇಗೆ/ಕೆ/ಕ್ಕೆ | ಗೆ/ಇಗೆ/ಕೆ/ಕ್ಕೆ | ಸಂಪ್ರದಾನ |
| 5 | ಪಂಚಮೀ | ದೆಸೆಯಿಂದ | ಅತ್ತಣಿಂ/ಅತ್ತಣಿಂದಂ | ಅಪಾದಾನ |
| 6 | ಷಷ್ಠೀ ವಿಭಕ್ತಿ | ಅ | ಅ | ಸಂಬಂಧ |
| 7 | ಸಪ್ತಮೀ | ಅಲ್ಲಿ | ಒಳ್ | ಅಧಿಕರಣ |

*****

ಸಂಶಯದೊಳ್, ಜಲದಿಂ, ಮರದತ್ತಣಿಂ, ರಾಯಂಗೆ, ಪ್ರೀತಿಗೆ, ಬಿರುಗಾಳಿಗೆ, ಜಲಕ್ಕೆ, ಬಿದ್ದುದನ್ನು, ಭರವಸೆಗಳ

## 9. ಸಂಧಿಗಳು

### ಕನ್ನಡ ಸಂಧಿಗಳು

**'ಲೋಪ ಸಂಧಿ' (ಸ್ವರ ಸಂಧಿ)**

ಊರೂರು ಬಲ್ಲೆನೆಂದು ಮಾತಂತು
ಸಂಪನ್ನರಾದ ಕಾಣಲಾಗದು ತಪ್ಪಲೀಯದೆ
ಬಂದಲ್ಲದೆ ತಕ್ಕನಿತು ಪೂಳ್ದೆಡೆ
ಇರುಳಳಿದು ತೆರೆದಿಕ್ಕುವ ಮನದೊಳಗೆ
ಚರಿಸುತದ್ವರದ ಲೇಖನವನೋದಿ ನಿಂತಿರ್ದನು
ಕಾದಾಟದಾಟ ಆದನೆಂಬ ನೆತ್ತರೊಂದೆ
ತೆಗೆದುತ್ತರೀಯಮಂ ಬೇಡಬೇಡರಸುಗಳ ತಿಂಗಳಿನೂರು

**'ಆಗಮ ಸಂಧಿ' (ಸ್ವರ ಸಂಧಿ)**

ಕೈಯನ್ನು ಮಳೆಯಿಂದ ಶಾಲೆಯಲ್ಲಿ
ಮರವನ್ನು ಮಗುವಿಗೆ ಭೇದವಿಲ್ಲ
ವೃದ್ಧಿಯಾಗಿ ಭೇದವಾಗಿ ಮನೆಯೊಳಗೆ
ಶವವಾದವು ವೇದಿಯಲ್ಲಿ

**'ಆದೇಶ ಸಂಧಿ' (ವ್ಯಂಜನ ಸಂಧಿ)**

ಮಳೆಗಾಲ ಮೈದೋರು ಬೆಂಬತ್ತು
ಕೈವಿಡಿದು ಧೃತಿಗೆಟ್ಟು ಪೋಗಲ್ವೇಳ್ಕುಂ
ಕಳ್ಗುಡಿ ಹೊಸಗಾಲ ಕಡುವೇಳ್ಪು ಮೆಲ್ವಾತು, ದಿಗ್ಮಂಡಲ

## 10. ಸಂಸ್ಕೃತ ಸಂಧಿಗಳು

**'ಸವರ್ಣ ದೀರ್ಘ ಸಂಧಿ' (ಸ್ವರ ಸಂಧಿ)**

ಮಹಾತ್ಮ ಗಿರೀಶ ಸುರಾಸುರ ವಧೂಪೇತ
ಸಕಳಾಚಾರ್ಯ ಜಿನಾಲಯ ಚಂದ್ರಾರ್ಕ ನಿಜಾಶ್ರಮ
ವಲ್ಕಲಾವೃತ ದ್ರವ್ಯಾರ್ಥಿ

**'ಗುಣ ಸಂಧಿ' (ಸ್ವರ ಸಂಧಿ)**

ದೇವೇಂದ್ರ ಜ್ಞಾನೇಶ್ವರ ಸೂರ್ಯೋದಯ ಮಹರ್ಷಿ
ಮಹೇಶ ಮಂಡಳೇಶ್ವರ ಕಲೋಪಾಸಕ ಮದೋನ್ಮತ್ತ

**'ವೃದ್ಧಿ ಸಂಧಿ'**

ಏಕೈಕ ಜನೈಕ್ಯ ವನೌಷಧಿ ಅಷ್ಟೈಶ್ವರ್ಯ

**'ಯಣ್ ಸಂಧಿ' (ಸ್ವರ ಸಂಧಿ)**

ಅತ್ಯವಸರ ಕೋಟ್ಯಧೀಶ್ವರ ಕೋಟ್ಯನುಕೋಟಿ ಜಾತ್ಯತೀತ

**'ಜಶ್ತ್ವ ಸಂಧಿ' (ವ್ಯಂಜನ ಸಂಧಿ)**

ವಾಗ್ದೇವಿ ಅಜಂತ ಷಡಾನನ ದಿಗಂತ ಅಬ್ಧಿ

**'ಶ್ಚುತ್ವ ಸಂಧಿ' (ವ್ಯಂಜನ ಸಂಧಿ)**

ಪಯಶ್ಶಯನ ಶರಚ್ಚಂದ್ರ ಜಗಜ್ಜ್ಯೋತಿ ಬೃಹಚ್ಛತ್ರ

**'ಅನುನಾಸಿಕ ಸಂಧಿ' (ವ್ಯಂಜನ ಸಂಧಿ)**

ಷಣ್ಮುಖ ಸನ್ಮಾನ ವಾಙ್ಮಯ ಉನ್ಮಾದ ತನ್ಮಯ ಶ್ರೀಮನ್ಮಹಾ

## 11. ಸಮಾಸಗಳು

**ತತ್ಪುರುಷ ಸಮಾಸ**

ಬೆಟ್ಟದಾವರೆ ತಲೆನೋವು ದೈವಭಕ್ತಿ ಸ್ವಾಮಿದ್ರೋಹ ಪರಧನ
ಪೂದೋಟ ಕಾಲುಬಳೆ ಧನದಹರಣ

**ಕರ್ಮಧಾರಯ ಸಮಾಸ**

ಇಮ್ಮಾವು ಮೆಲ್ವಾತು ಹೊಸಗನ್ನಡ ಅತಿಕುಟಿಲ ಕಟ್ಟೇಕಾಂತ
ಪೆರ್ಮಗ ಪೆರ್ಮರ ನಲ್ಗುದುರೆ ಹೆದ್ದೊರೆ ದಿವ್ಯ ಶರಾಳಿ

**ದ್ವಿಗು ಸಮಾಸ**

ಮೂಗಾವುದ ಮುಕ್ಕಣ್ಣು ಸಪ್ತಸ್ವರಗಳು

**ಬಹುವ್ರೀಹಿ ಸಮಾಸ**

ಹಣೆಗಣ್ಣ ಮುಕ್ಕಣ್ಣ ಚಕ್ರಪಾಣಿ ಅಬ್ಜೋದರ
ಘಟಸಂಭೂತ ಗಾಂಡೀವಿ ಪವನನಂದನ ಮದಾಂಧ
ಇನತನೂಜ ದನುಜರಿಪು ಮುರಾರಿ ಮೇದಿನೀಪತಿ
ರಾಜೀವಸಖ ಅಂತರಾತ್ಮಜ ದಿನಪಸುತ ನಾಣಿಲಿ, ಮಹೀಪತಿ

**ಅಂಶಿ ಸಮಾಸ**

ಅಂಗೈ ಹಿಂದಲೆ ಕಡೆಗಣ್ಣು ಮುಂಗೈ ನಡುರಾತ್ರಿ ನಟ್ಟಡವಿ

**ದ್ವಂದ್ವ ಸಮಾಸ**

ಗಿರಿವನದುರ್ಗಗಳು ಕರಿತುರಗರಥಗಳು ಹನುಮಭೀಮರಾಮರು
ಸೂರ್ಯಚಂದ್ರರು ಮಾದ್ರಮಾಗಧಯಾದವರು ಕೆರೆಕಟ್ಟೆಬಾವಿಗಳು
ಪಾರ್ಥಭೀಮರು

**ಕ್ರಿಯಾ ಸಮಾಸ**

ಮೈಮುಚ್ಚು ಕಣ್ದೆರೆ ಕಂಗೆಡು ಕೈಕೊಳ್ಳುವುದು
ಸಾಕ್ಷಿಮಾಡಿ ಬಲವಂದು ಮೋಸಮಾಡು
ಕೈಯಾನು ಹೊಗೆದೋರು ಸೊಲ್ಗೇಳಿ
ಬಿಲ್ಗೊಂಡು ಬಿಲ್ದಿರುವನೇರಿಸಿ ಕಳ್ಗುಡಿದ

**ಗಮಕ ಸಮಾಸ**

ಆ ಕಲ್ಲು ಈ ಬೆಕ್ಕು ನೆಯ್ದುವಸ್ತ್ರ

*****

## 12. ತದ್ಧಿತಾಂತಗಳು

| ತದ್ಧಿತಾಂತ ನಾಮ | | ತದ್ಧಿತಾಂತ ಭಾವನಾಮ | ತದ್ಧಿತಾಂತಾವ್ಯಯ | |
|---|---|---|---|---|
| ಪುಲ್ಲಿಂಗ | ಸ್ತ್ರೀಲಿಂಗ | | | |
| | | ಬಡತನ | ಚಂದ್ರನಂತೆ | ಅಂತೆ |
| ಮೋಸಗಾರ | ಮೋಸಗಾರ್ತಿ | ಸಿರಿತನ | ಚಂದ್ರನವೋಲ್ | ವೋಲ್ |
| ಕನ್ನಡಿಗ | ಕನ್ನಡತಿ | ಹಿರಿಮೆ | ಮನೆಯವೋಲು | ವೋಲು |
| ಬಳೆಗಾರ | ಬಳೆಗಾರ್ತಿ | ಜಾಣತನ | ಕರಡಿಯವೋಲ್ | ವೋಲ್ |
| ಕೋಲುಕಾರ | ಕೋಲುಕಾರ್ತಿ | ಚೆಲುವಿಕೆ | ಮನೆಯತನಕ | ತನಕ |
| ಸಿರಿವಂತ | ಸಿರಿವಂತೆ | ಕಪ್ಪು | ಶಾಲೆಯವರೆಗೆ | ವರೆಗೆ |
| | | ಪೆರ್ಮೆ | ಇವಳಮಟ್ಟಿಗೆ | ಮಟ್ಟಿಗೆ |
| | | | ನನಗೋಸ್ಕರ | ಓಸ್ಕರ |
| ಗಾರ, ಕಾರ, ಇಗ, | ಇತಿ, ಇತ್ತಿ ಗಿತ್ತಿ, ತಿ | ತನ | ರಾಮನ ಸಲುವಾಗಿ | ಸಲುವಾಗಿ |
| ಆಡಿಗ, ವಂತ | | ಇಕೆ | ಸೀತೆಗಿಂತ | ಗಿಂತ |
| ಇಕ, | | ಪು | ನಿನಗಾಗಿ | ಗಾಗಿ |
| | | ಮೆ | ಮದುವೆಗೋಸುಗ | ಓಸುಗ |

*****

## 13. ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಬರೆಯುವಿಕೆ–ವಿಕೆ | ಮಾಡಿ–ಇ |
| ತಿನ್ನುವ | ತಿನ್ನುವಿಕೆ–ವಿಕೆ | ಓಡಿ–ಇ |
| ನಡೆಯುವ | ನಡೆತ–ತ | ಉಣ್ಣದೆ–ಅದೆ |
| ಓಡಿದ | ಓಟ–ಟ | ಮಾಡದೆ–ಅದೆ |
| ಓಡುವ | ನೋಟ–ಟ | ನಡೆಯುತ್ತ–ಉತ್ತ |
| ಬಾಳುವ | ಮಾಟ–ಟ | ಬರುತ್ತ–ಉತ್ತ |
| ಬರೆಯುವ | ಬಾಳುವಿಕೆ–ಇಕೆ | ಮಾಡುತ್ತ–ಉತ್ತ |
| ಓಡಿದ | ಅಂಜಿಕೆ–ಇಕೆ | ತಿಂದು–ದು |
| ಬಾಳಿದ | ನಂಬಿಕೆ–ಇಕೆ | ಬರೆದು–ದು |
| ಬರೆದ | ಉಡುಗೆ–ಗೆ | ಹೋಗಲಿಕ್ಕೆ–ಅಲಿಕ್ಕೆ |
| ಓಡದ | ತೊಡುಗೆ–ಗೆ | ಮಾಡಲಿಕ್ಕೆ–ಅಲಿಕ್ಕೆ |
| ಬಾಳದ | ನಗುವುದು–ಉದು | ಮಾಡಲು–ಅಲು |
| ಬರೆಯದ | ತಿನ್ನುವುದು–ಉದು | ಮಾಡ–ಅ |

## 14. ಅವ್ಯಯಗಳು

**ಅವ್ಯಯಗಳು :–** ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು **'ಅವ್ಯಯಗಳು'** ಎನ್ನುವರು.

**ಸಾಮಾನ್ಯಾವ್ಯಯಗಳು :–** ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ **'ಸಾಮಾನ್ಯಾವ್ಯಯಗಳು'** ಎನ್ನುವರು. ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ:– ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ ತಟ್ಟನೆ, ತರುವಾಯ, ಹಾಗೆ, ಅಂತು ಬೇರೆ, ಬಳಿಕ, ಕೂಡಲೆ, ಚೆನ್ನಾಗಿ

**ಅನುಕರಣಾವ್ಯಯಗಳು :–** ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು **'ಅನುಕರಣಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಚಟಚಟ, ಕರಕರ, ಚುರುಚುರು, ಧಗಧಗ ರೊಯ್ಯನೆ ಸುಯ್ಯನೆ ಘುಳುಘುಳು ದಡದಡ

**ಭಾವಸೂಚಕಾವ್ಯಯಗಳು :–** ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ – ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು **'ಭಾವಸೂಚಕಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಅಹಾ! ಭಳಿರೆ! ಓಹೋ! ಹೋ! ಅಃ! ಆಃ! ಓ!

**ಕ್ರಿಯಾರ್ಥಕಾವ್ಯಯಗಳು :–** ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎಂದು ಕರೆಯಲಾಗಿದೆ.

ಉದಾ :– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

**ಸಂಬಂಧಾರ್ಥಕಾವ್ಯಯಗಳು :–** ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ **'ಸಂಬಂಧಾರ್ಥಕಾವ್ಯಯಗಳು'**

**ಉದಾ:– ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.**

**ಪದಗಳ ಜೋಡಣೆ :–** ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.

**ಪದ ಸಮುಚ್ಚಯ ಜೋಡಣೆ :–**ಅವನು ಬರುವುದೂ ಬೇಡ; ಆ ಕೆಲಸ ಆಗುವುದೂ ಬೇಡ.

**ವಾಕ್ಯಗಳ ಜೋಡಣೆ :–**ಅವನು ಬರಲಿಲ್ಲ **ಆದ್ದರಿಂದ** ನಾನೂ ಬರಲಿಲ್ಲ.

**ಅವಧಾರಣಾರ್ಥಕಾವ್ಯಯಗಳು**

ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು **'ಅವಧಾರಣಾರ್ಥಕಾವ್ಯಯ'** ಎಂದು ಕರೆಯುತ್ತಾರೆ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

**ಉದಾ:–** ಅವನೇ, ಅದುವೇ, ಅವಳೇ, ನೀನೇ ಅವರೇ

**ಪದಗಳ ಕೊನೆಯಲ್ಲಿರುವ 'ಏ' ಎಂಬ ಅಕ್ಷರವೇ ಅವಧಾರಣಾರ್ಥಕಾವ್ಯಯ.**

*****

## 15. ಲೇಖನ ಚಿಹ್ನೆಗಳು

**ಪೂರ್ಣವಿರಾಮ : – ( . )** ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಅರ್ಧವಿರಾಮ ಚಿಹ್ನೆ :–** ( ; )ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ ಚಿಹ್ನೆ :–** ( , )ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ :–** ( ? ) ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಲಾಗುವುದು.

ಉದಾ: ದಾಶರಥಿ ಯಾರು?

**ಭಾವಸೂಚಕ ಚಿಹ್ನೆ :–** ( ! ) ಹರ್ಷ, ಅಶ್ಚರ್ಯ, ಸಂತೋಷ, ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ 'ಭಾವಸೂಚಕ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ :–** ( " " ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ. ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ.ವಿಶ್ವೇಶ್ವರಯ್ಯ ಅವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ :–** ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ 'ವಾಕ್ಯವೇಷ್ಟನ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಕನ್ನಡದಲ್ಲಿ 'ಇಂಗ್ಲೀಷ್', 'ಪರ್ಷಿಯನ್', 'ಪೋರ್ಚುಗೀಸ್' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :–** ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಲಾಗುತ್ತದೆ.

**ಉದಾಹರಣೆ** :ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: ಪಂಚಮಹಾವಾದ್ಯಗಳು: ತಾಳ,ಹಳಗ,ಗಂಟೆ,ಮೌರಿ,ಸನಾದಿ

*****

## 16. ವಾಕ್ಯ ಪ್ರಕಾರಗಳು

1. ಸಾಮಾನ್ಯ ವಾಕ್ಯ 2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ) 3. ಮಿಶ್ರ ವಾಕ್ಯ.

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು **'ಸಾಮಾನ್ಯ ವಾಕ್ಯ'** ಎಂದು ಕರೆಯುತ್ತಾರೆ.

**ಉದಾ:–**

1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ :–** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

**ಉದಾ:–**ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

**ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು **'ಮಿಶ್ರವಾಕ್ಯ'** ಎನ್ನುತ್ತೇವೆ.

**ಉದಾ:–**ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

## 17. ಕ್ರಿಯಾಪದ/ರೂಪಗಳು

ಕ್ರಿಯಾಪದಗಳಲ್ಲಿ ವಿಧ್ಯರ್ಥಕ,ನಿಷೇಧಾರ್ಥಕ,ಸಂಭವನಾರ್ಥಕ ಕ್ರಿಯಾಪದ ಗಳೆಂದು ಮೂರು ವಿಧಗಳಿವೆ

- **ವಿಧ್ಯರ್ಥಕ: (ಅಲಿ)** ಮಾಡಲಿ,ತಿನ್ನಲಿ,ಓದಲಿ
- **ನಿಷೇಧಾರ್ಥಕ: (ಅನು)** ಮಾಡನು, ತಿನ್ನನು,ಓದರು
- **ಸಂಭಾವನಾರ್ಥಕ: (ಆನು)** ಮಾಡಿಯಾನು, ತಿಂದಾಳು, ಓದಿಯಾರು

## 18. ಅಲಂಕಾರ:

ಅಲಂಕಾರಗಳಲ್ಲಿ **ಶಬ್ದಾಲಂಕಾರ ಮತ್ತು ಅರ್ಥಾಲಂಕಾರ**ಗಳೆಂದು ಎರಡು ವಿಧಗಳಿವೆ.

**ಶಬ್ದಾಲಂಕಾರ:– ಇದರಲ್ಲಿ ಅನುಪ್ರಾಸ,ಯಮಕ, ಚಿತ್ರಕವಿತ್ವ ಎಂದು ಮೂರು ವಿಧಗಳಿವೆ**

ಅನುಪ್ರಾಸ: ಅನುಪ್ರಾಸಗಳಲ್ಲಿ ವೃತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂಬುದಾಗಿ ಮತೆ ವಿಭಾಗಿಸಲಾಗಿದೆ

ವೃತ್ಯನುಪ್ರಾಸ: ಒಂದು ಅಥವಾ ಎರಡು ವ್ಯಂಜನಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನರಾವರ್ತಿತಗೊಂಡರೆ ಅದನ್ನು ವೃತ್ಯನುಪ್ರಾಸ ಎನ್ನುವರು

ಉದಾ: ಎಳೆಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು.

ಛೇಕಾನುಪ್ರಾಸ: ಎರಡೆರಡು ವ್ಯಂಜನಗಳು ಪುನರಾವರ್ತಿತಗೊಂಡರೆ ಅದನ್ನುಛೇಕಾನುಪ್ರಾಸ ಎನ್ನುವರು.

ನೋಡಂ ನೋಡಂ ಕಾಡಂಕಾಡಂ ಬೇಡಂಬೇಡಂ

ಯಮಕ: ಮೂರು ಅಥವಾ ಮೂರಕ್ಕಿಂತ ಹರಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ ಒಂದು ಪದ್ಯದ ಆದಿ,ಮಧ್ಯ ಅಂತ್ಯದಲ್ಲಿ ನಿಯತವಾಗಿ ಪುನಃಪುನಃ ಬಂದರೆ ಅದು ಯಮಕಾಲಂಕಾರ

ಅಮಳ್ಗಳ್ ದಮಳ್ಗಳ್ , ಸಮರ ಸಮರ

ಚಿತ್ರ ಕವಿತ್ವ: ಪ್ರೌಢ ಪಂಡಿತ ಕವಿಗಳು ತಮ್ಮ ಬುದ್ದಿ ಕೌಶಲದಿಂದ ವೈಚಿತ್ರ್ಯಪೂರ್ಣವಾಗಿ ಅಕ್ಷರಗಳನ್ನೂ ಪದಗಳನ್ನೂ ಜೋಡಿಸಿ ಪದ್ಯ ರಚಿಸುತ್ತಾರೆ. ಇದಕ್ಕೆ ಚಿತ್ರ ಕವಿತ್ವ ಅಥವ ಬಂದ ಎನ್ನುವರು. ಇದರಲ್ಲಿ ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರಯಕ್ಷರ, ಹಾರಬಂಧ, ಮುರುಜಬಂದ ಇತ್ಯಾದಿ ಪ್ರಕಾರಗಳಿವೆ

ಅರ್ಥಾಲಂಕಾರ : ಉಪಮಾಲಂಕಾರ

ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು

ಉಪಮೇಯ: ಭೀಮ ದುರ್ಯೋಧನರು ಉಪಮಾನ: ಮದಗಜಗಳು

ಉಪಮಾವಾಚಕ: ಅಂತೆ ಸಮಾನ ಧರ್ಮ: ಹೋರಾಡುವುದು

ಸಮನ್ವಯ: ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

ಉದಾಹರಣೆ: ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ

ಒಳಗಿನ ಮಂದಿ ಗುಂಡು ಹೊಡೆದರೋ ಮುಂಗಾರಿ ಸಿಡಿಲು ಸಿಡಿದ್ಹಾಂಗ

ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ

ರೂಪಕಾಲಂಕಾರ

ಮಾರಿಗೌತಣವಾಯ್ತು ನಾಳಿನ ಭಾರತವು

ಉಪಮೇಯ: ನಾಳಿನ ಭಾರತವು

ಉಪಮಾನ: ಮಾರಿಗೌತಣವಾಯ್ತು

ಅಲಂಕಾರ: ರೂಪಕಾಲಂಕಾರ

ಸಮನ್ವಯ: ಉಪಮೇಯ ನಾಳಿನ ಭಾರತವು ಎಂಬುದನ್ನು ಉಪಮಾನವಾದ ಮಾರಿಗೌತಣವಾಯ್ತು ಎಂಬುದಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ

ಉದಾಹರಣೆ: ವಿರಸ ಮರಣ, ಆತ್ಮ ಸುರಭಿ

ಶಿಕ್ಷಣವು ಸಂಜೀವಿನಿ

ಪ್ರೀತಿಯ ಹಣತೆ

ಚರಣಾಂಬುಜ

ಸೀತೆಯ ಮುಖ ಕಮಲ ಅರಳಿತು

## 19. ಛಂದಸ್ಸು:

ಕಂದ:

ನಿಮಗೆ ಪೊಡೆಮಟ್ಟು ಪೋಪೀ

ಸಮಕಟ್ಟಿಂ ಬಂದೆನಹಿಯರೊಳ್ ಸಂಧಿಯನೇಂ

( ಛಲಮನೆ ಮೆರೆವೆಂ ಪಧ್ಯದ ಇತರೆ ಸಾಲುಗಳಿಗೆ ಪ್ರಸ್ಥಾರ ಹಾಕಿರಿ)

ಅತಿಕುಟಿಲಮನಂ ಧನಲು

ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

ಅಂತೆಂಬನಾರ್ಗೆ ಪಿರಿದುಂ

ಭ್ರಾಂತು ದಲೇಂ ದಗರೋಣನೆಂಬನೇಂ ಪಾರ್ವನೆ ಪೇ

ಷಟ್ಪದಿ:

ಇನತನೂಜನಕೂಡೆ ಮೈದುನ

ತನದ ಸರಸವನೆಸಗಿ ರತದೊಳು

ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ

(ಕೌರವೇಂದ್ರನ ಕೊಂದೆ ನೀನು ಪದ್ಯದ ಇತರೆ ಪದ್ಯಗಳಿಗೆ ಪ್ರಸ್ತಾರ ಹಾಕಿರಿ)

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೊರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

(ವೀರಲವ ಪದ್ಯದ ಇತರೆ ಸಾಲುಗಳಿಗೂ ಪ್ರಸ್ತಾರ ಹಾಕುವುದನ್ನು ಕಲಿಯಿರಿ)

ಅಕ್ಷರ ಗಣ

**ಯಮಾತಾರಾಜಭಾನಸಲಗಂ**

ಚಂಪಕ ಮಾಲಾ ವೃತ್ತ 'ನ,ಜ,ಭ,ಜ,ಜ,ಜ,ರ'

ಖಳನೊಳವಿಂಗೆ ಕುಪ್ಪೆ ವರಮೆಂಬವೋಲಾಂಬರಮುಂಟೆ ನಿನ್ನದೊಂ

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

(ಕೆಮ್ಮನೆ ಮೀಸೆವೊತ್ತನೆ ಪದ್ಯದ ಇತರೆ ಸಾಲುಗಳಿಗೆ ಪ್ರಸ್ತಾರ ಹಾಕಿ)

ಉತ್ಪಲ ಮಾಲಾ ವೃತ್ತ ' ಭ,ರ,ನ,ಭ,ಭ,ರ,ಲ,ಗ

ಮೇದಿನಿಯಂ ಕ್ರಮುಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

## 20. ಅನ್ಯದೇಶೀಯ:

1.ಪಾರ್ಶಿಯಿಂದ: ಪಾರ್ಸಿ ದಳ್ಳಾಳಿಯು ದವಾಖಾನೆಯ ರಸ್ತೆ ಬಳಿಯ ಜಮೀನಿಗಾಗಿ ಚೌಕಾಶಿ ಮಾಡಿ ಕೊನೆಗೆ ಆಮದು ಮಾಡಿಕೊಳ್ಳುವುದಾಗಿ ಅಬಕಾರಿ ಅಧಿಕಾರಿಗೆ ಅಜಮಾಯಿಸಿ ನೀಡಿದ

2. ಉರ್ದು: ಉರ್ದು ಇಲಾಖೆಗೆ ತಾರೀಖು---ರಂದು ಬಂದ ನಮ್ಮ ತಾಲೂಕಿನ ಮೂರನೇ ದರ್ಜೆಯ ಬಂದೂಕುಧಾರಿ ಯಾರ ಅಹವಾಲಿಗೂ ಕಿಮ್ಮತ್ತು ನೀಡದೆ ಅಪರಾಧದಲ್ಲಿ ಶಾಮೀಲಾಗಿರುವುದಾಗಿ ಬರೆದು ರುಜು ಮಾಡಲು ಒಪ್ಪದೆ ಗಲಾಟೆ ಶುರು ಮಾಡಿದನು

3. ಗ್ರೀಕ್: ಗ್ರೀಕನೊಬ್ಬ ದಮ್ಮು ಬಿಗಿದು ದಮ್ಮಡಿ ಬಡಿದು ದಮ್ಮಡಿ ದಿನಾರ ಗದ್ಯಾಣ ಎಂದ

ಅರಬ್ಬೀ : ಅರಬ್ಬಿ ಅಧಿಕಾರಿಯೊಬ್ಬ ಅಸಲು ನಕಲಿ ಅರಿಯದೆ ತರಬೇತಿಗೆ ಬಂದು ಕಾಯ್ದೆ ಮೀರಿ ಗಲೀಜು ಮಾಡಿ ತಕರಾರು ಎಬ್ಬಿಸಿ ಅಮಾನತುಗೊಂಡು ತಕ್ಕ ಇನಾಮು ಪಡೆದ.

4. ಹಿಂದುಸ್ತಾನಿ: ಹಿಂದುಸ್ಥಾನಿ ಕಛೇರಿ ಕಾರ್ಖಾನೆಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಕಾಗದದಲ್ಲಿ ಅರ್ಜಿ ಬರೆದು ಕುರ್ಚಿ ಮೇಲೆ ಕುಳಿತು ದರ್ಬಾರಿ ನಿಂದ ಹುಕುಂ ಮಾಡುವವರಿಗೆ ಸಲಾಮು ಹೊಡೆಯಬೇಕು.

5. ಪೋರ್ಚುಗೀಸ್: ಪೋರ್ಚುಗೀಸ್ ನಿಂದ ರಶೀದಿ ಪಡೆಯದೆ ತಂಬಾಕು ತಂದು ಮೇಜಿನ ಮೇಲಿಟ್ಟು ಸಾಬೂನು ಹಾಕಿ ಚೊಂಬಿನಲ್ಲಿದ್ದ ನೀರಿನಿಂದ ಕೈತೊಳೆದು ಅನಾನಸು ತಿಂದು ಚಾ ಕುಡಿದು ಬಟ್ಟೆ ಇಸ್ತ್ರಿ ಮಾಡುವಾಗ ಕೈ ಸುಟ್ಟು ಆಸ್ಪತ್ರೆ ಸೇರಿದ

6. ಇಂಗ್ಲೀಷ್: ಬಸ್ಸು,ಕಾರು,ಕಾಲೇಜು, ಲೈಟು, ಪೆನ್ನು-

21. ಪದಗಳ ಅರ್ಥ:

22. ಹೊಸಗನ್ನಡ ರೂಪ: ಹಳಗನ್ನಡ ಪದಗಳಿಗೆ ಹೊಸಗನ್ನಡ ರೂಪ ಬರೆಯಿರಿ

**ಶುಭವಾಗಲಿ**